ಗಂಧದ ಎಣ್ಣೆಯ ಕಾರ್ಖಾನೆಯ ಲಾಭ ನಷ್ಟದ ವಿವರ

೧೭೬ ಶ್ರೀ ವೇದಾಂತ ಹೆಬ್ಬಿಗೆ, (ಕೃಷ್ಣ ರಾಜ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಕಳೆದ ಮೂರು ವರ್ಷಗಳಿಂದ ಬಂದಿರುವ ಲಾಭ ಅಥವಾ ಹೊಂದಿದ ನಷ್ಟವೆಷ್ಟು ?

ಆ) ಕಾರ್ಖಾನೆಯು ನಷ್ಟ ಹೊಂದಲು ಮುಖ್ಯ ಕಾರಣಗಳೇನು?

ಇ) ಕಾರ್ಖಾನೆಗೆ ಗಂಧದ ಮರದ ಸರಬರಾಜು ಆಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಗಂಧದ ಮರ ಸರಬರಾಜು ಮಾಡಲು ಕೈಗೊಂಡಿರುವ ಕ್ರಮವೇನು ?

ಶ್ರೀ ಜೆ. ಹೆಚ್. ಪಟೇಲ್, (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಸಚಿವರು).—

ಅ) ಲಾಭ ನಷ್ಟದ ವಿವರ ಈ ಕೆಳಗಿನಂತಿದೆ.—

ವರ್ಷ	ಲಾಭ,	ನಷ್ಟ (ಲಕ್ಷ ರೂ. ಗಳಲ್ಲಿ)
೧೯೮೪–೮೫	—	೨೯.೭೪
೧೯೮೫–೮೬	೩.೬೧	—
೧೯೮೬–೮೭	೫.೩೮ (ತಾತ್ಕಾಲಿಕ)	—

ಆ) ಕಳೆದ ಎರಡು ವರ್ಷಗಳಿಂದ ಕಾರ್ಖಾನೆಯು ನಷ್ಟ ಹೊಂದಿಲ್ಲವಾದ ಕಾರಣ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಹೌದು.

ಈ) ಕಾರ್ಖಾನೆಗೆ ೧೦೦ ಮೆಟ್ರಿಕ್ ಟನ್ ಗಂಧದ ಮರವನ್ನು ಸರಬರಾಜು ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅರಣ್ಯ ಆಧಾರಿತ ಕೈಗಾರಿಕೆಗಳು

೧೪೯ ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅರಣ್ಯ ಆಧಾರಿತ ಕೈಗಾರಿಕೆಗಳಿಗೆ ಹೊಸದಾಗಿ ಅಥವಾ ಇರುವ ಕೈಗಾರಿಕೆಗಳ ಸ್ಥಳಾಂತರ ಕ್ಕೆ ಪರವಾನಗಿ ನೀಡುವುದನ್ನು ನಿಷೇಧಿಸಲಾಗಿದೆಯೇ ?

ಆ) ಹಾಗೇ ನಿಷೇಧಿಸಲು ಕಾರಣಗಳೇನು ಮತ್ತು ಸದರಿ ಸರ್ಕಾರಿ ಆಜ್ಞೆಯ ಕ್ರಮ ಸಂಖ್ಯೆ ದಿನಾಂಕವೇನು, (ಆಜ್ಞೆಯ ಪ್ರತಿಯನ್ನು ಒದಗಿಸುವುದು)

ಇ) ಈಗಾಗಲೇ ಇರುವ ಕೈಗಾರಿಕೆಗಳ ಸ್ಥಳಾಂತರಕ್ಕೆ ವಿಧಿಸಿರುವ ನಿಷೇಧದಿಂದಾಗಿ ಅನೇಕರಿಗೆ ತೊಂದರೆಯಾಗಿರುವುದರಿಂದ ಸದರಿ ಆಜ್ಞೆಯನ್ನು ಸೂಕ್ತವಾಗಿ ಪರಿಷ್ಕರಿಸಲು ಸರ್ಕಾರವು ಆಲೋಚಿಸುತ್ತದೆಯೇ ?

ಶ್ರೀ ಜೆ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ರಸ್ತೆ ಬದಿಗಳಲ್ಲಿ ಗಿಡ ನೆಡುವ ಬಗ್ಗೆ ವಿವರಗಳು

೪೦೫ ಶ್ರೀಮತಿ ಲೀಲಾವತಿ ಆರ್. ಪ್ರಸಾದ್(ಅಥಣಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿರುವ ರಸ್ತೆಗಳ ಅಕ್ಕಪಕ್ಕದಲ್ಲಿ ಎಷ್ಟು ಗಿಡಗಳನ್ನು ಹೊಸದಾಗಿ ನೆಡಲಾಗಿದೆ ಹಾಗೂ ಎಷ್ಟು ಗಿಡಗಳನ್ನು ರಸ್ತೆ ಅಗಲ ಮಾಡುವಾಗ ಕಡಿಯಲಾಗಿದೆ ?

ಆ) ಹೊಸದಾಗಿ ನೆಟ್ಟ ಗಿಡಗಳು ಯಾವ ಜಾತಿಯವು ಹಾಗೂ ಎಷ್ಟು ವಯಸ್ಸಿನವು ?

ಇ) ಗಿಡಗಳನ್ನು ನೆಡುವ ಬಗ್ಗೆ ಯಾವ ನೀತಿಯನ್ನು ಅನುಸರಿಸಲಾಗುತ್ತಿದೆ ?

ಶ್ರೀ ಜೆ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಕಳೆದ ೩ ವರ್ಷಗಳಲ್ಲಿ ೪೫೨೦೬೧೧ ಸಸಿಗಳನ್ನು ಹೊಸದಾಗಿ ನೆಡಲಾಗಿದ್ದು, ೫೬೩೦ ಗಿಡಗಳನ್ನು ಕಡಿಯಲಾಗಿದೆ.

ಆ) ಹೊಸದಾಗಿ ನೆಟ್ಟ ಗಿಡಗಳು ಹಣ್ಣಿನಹಂಪಲು ಬಿಡುವಂತಹ ನೆರಳು ಹಾಗೂ ಸೌದೆ ಕೊಡುವಂತಹವುಗಳಾಗಿರುತ್ತವೆ. ವಿವರ ಕೆಳಕಂಡಂತಿದೆ.–

ಬೇವು, ನೇರಳೆ, ಹುಣಸೆ, ಫೆಲ್ಟೊಫಾರಂ, ಗುಲ್ - ಮೊಹರ್, ಮಾವು, ಹೊಂಗೆ ಜಕರಾಂಡ, ಬಹುನಿಯ, ಸಿಲ್ವರ್ ಓಕ್, ದೂಡ ಸ್ಪೇತೋಡಿಯಾ, ಹಲಸು ಬಾಗೆ, ಬಸವನಪಾದ, ಮಹಾಗನಿ, ಹೆಬ್ಬಲಸು, ರೈನ್‌ಟ್ರೀ, ಹಿಪ್ಪೆ, ಸಿಸ್ಸು, ಬಾದಾಮಿ, ಬಿಲ್ವಪತ್ರೆ, ನೀಮ್ ಫ್ಲವರ್, ದೇವದಾರು, ಸೀಮೆತಂಗಡಿ, ಅಂಟ್ವಾಳ, ಬಳಂಜಿ, ಆಕೇಶಿಯಾ ನಿಯೋಟಿಕ, ಆಕೇಶಿಯಾ, ಆರ್ಕಲಿಪಾರ್ಮಿನ್, ಯುಕಲಿಪ್ಟಸ್, ಜಿಪಾನಿಕ, ಕ್ಯಾಸುರೀನ, ಜಾಲಿ ಗುಲ್ಮರ, ಪೆಬ್ಬೇವು ಹಾಗೂ ಉರುವಲಿಗೆ ಉಪಯುಕ್ತವಾದ ಸಸಿಗಳನ್ನು ಸಹ ನೆಡಲಾಗುತ್ತಿದೆ. ಮೇಲ್ಕಂಡ ಸಸಿಗಳು ೧ ವರ್ಷದಿಂದ ೩ ವರ್ಷದವುಗಳಾಗಿರುತ್ತವೆ.

ಇ) ರಸ್ತೆ ಎರಡು ಬದಿಗಳಲ್ಲಿ ಗುಂಡಿ ತೆಗೆದು ಗಿಡಗಳನ್ನು ನೆಡಲಾಗಿದೆ. ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ರಸ್ತೆಗಳಲ್ಲಿ ಗುಣಿ ಮೆಥೆಡ್ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ರಸ್ತೆಗಳಲ್ಲಿ ಟ್ರೆಂಚಿಂಗ್ ಮತ್ತು ಫಿಟ್ಟಿಂಗ್ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಸಸಿಗಳನ್ನು ಒಂದು ಸಸಿಯಿಂದ ಇನ್ನೊಂದು ಸಸಿಗೆ ೧೦ ಮೀ ಅಂತರವಿರುವಂತೆ ೬೦ ಸೆ.ಮೀ ಗುಣಗಳಲ್ಲಿ ಒಂದು ವರ್ಷದಿಂದ ೩ ವರ್ಷಗಳವರೆಗೆ ಬೆಳಿಸಿರುವ ಎತ್ತರದ ಸಸಿಗಳನ್ನು ನೆಟ್ಟು ಅವುಗಳಿಗೆ ಮುಳ್ಳಿನ ಬೇಲಿ ಕಟ್ಟಿ ಪೋಷಿಸಲಾಗುತ್ತಿದೆ. ಈ ಪ್ರಮುಖ ಸಸಿಗಳ ಮಧ್ಯೆ ಮತ್ತು ಅಜೂಬಾಜೂ ಇರುವ ಜಾಗದಲ್ಲಿ ೫೦ ಸೆ.ಮೀ ಗುಂಡಿಗಳನ್ನು ಹಾಗೂ ೪×೦.೫×೦.೫ ಎಂ ಕಂದಕಗಳನ್ನು ತೆಗೆದು ಒಂದು ವರ್ಷದ ಉರುವಲು ಜಾತಿಯ ಸಸಿಗಳನ್ನು ನೆಟ್ಟು ಪೋಷಿಸಲಾಗುತ್ತಿದೆ.

ಬನಹಟ್ಟಿಯಲ್ಲಿ ಕೆ.ಇ.ಬಿ ಯ ಉಪವಿಭಾಗ ಕಛೇರಿ ಪ್ರಾರಂಭಿಸುವ ಬಗ್ಗೆ

೭೩. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯವಿದ್ಯುತ್ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ತಾಲ್ಲೂಕಿನ ಬನಹಟ್ಟಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ವಂಡಳಿಯ ಉಪವಿಭಾಗ ಕಛೇರಿಯನ್ನು ಆರಂಭಿಸುವ ಆಲೋಚನೆ ಸರ್ಕಾರದಪರಿಗಿದೆಯೆ ?